ವಿಶ್ವವಿದ್ಯಾನಿಲಯದ ಕರಡು ಬಿಲ್‌ನ್ನು ಸಲ್ಲಿಸಿರುತ್ತದೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ವಿಶೇಷಾಧಿಕಾರಿಗಳು ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಆಯವ್ಯಯ ಅಂದಾಜುಗಳ ತಃಖ್ತೆಯನ್ನು ಸಲ್ಲಿಸಿರುತ್ತಾರೆ. ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪಿಸಲು ಅಗತ್ಯವಾದ ಆಯವ್ಯಯ ವ್ಯವಸ್ಥೆ ಕರಡು ರೆಗ್ಯುಲೇಷನ್ ರಚನೆ ಮತ್ತು ಇನ್ನಿತರ ಕರ್ತವ್ಯಾಚರಣೆಯ ಸಾಧಕ ಭಾದಕಗಳನ್ನು ತೀವ್ರವಾಗಿ ಪರಿಶೀಲಿಸಲಾಗುತ್ತಿದೆ.

ವಿಷಯ:- ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೦: (೫೧೪)
ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ)
ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಖಾಸಗಿಯವರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ.ಜಿ. ರಾಮಕೃಷ್ಣ
(ವೈದ್ಯಕೀಯ ಶಿಕ್ಷಣ ಸಚಿವರು)

ಇಲ್ಲ.

ಕರ್ನಾಟಕ ಕ್ಯಾಪಿಟೇಷನ್ ಶುಲ್ಕ ರದ್ದಿತಿ ಅಧಿನಿಯಮ ೧೯೮೪, ನಿಯಮ ೫ ಉಪ ನಿಯಮ (೧)ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಆಕುಕ ೧೦೨ ಎಂಎಸ್‌ಎಫ್ ೮೭, ದಿನಾಂಕ ೫.೭.೧೯೮೯ರ ಪ್ರಕಾರ ಪರಿಷ್ಕೃತ ಬೋಧನಾ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.

ಶ್ರೀ ಸಿ. ಬೈರೇಗೌಡ:- ನಾನು ಮತ್ತು ನಮ್ಮ ಸ್ನೇಹಿತರಾದ ಶ್ರೀ ವೈ.ಕೆ. ರಾಮಯ್ಯನವರು ಇನ್ನೂ ಕೆಲವು ಸ್ನೇಹಿತರು ಈ ರೇಷ್ಮೆ ಗೂಡಿನ ಬೆಲೆಯನ್ನು ಇಳಿಸಿರುವ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:- ಎಲ್ಲಾ ಸೇರಿ ಅಡ್ಜರ್ನ್‌ಮೆಂಟ್ ಮೋಷನನ್ನು ಕಳುಹಿಸಿದ್ದೇವೆ. ರೇಷ್ಮೆ ಗೂಡು ದರ ಎಲ್ಲಾ ಕಡಿಮೆಯಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮ್ಮ ಕೊಠಡಿಗೆ ಬಂದು ಮೂರು ದಿವಸದಿಂದಲೂ ನಿಲುವಳಿ ಸೂಚನೆಯಬಗ್ಗೆ ಕೇಳುತ್ತಿದ್ದೇನೆ. ತಮಗೆ ಗೊತ್ತಿರುವ ಹಾಗೆ ನವೆಂಬರ್ ೧೬,೧೭,೧೮ ಬಿದ್ದಂಥ ಭಾರಿ ಮಳೆಯಿಂದ ನೆರೆ ಹಾವಳಿಯಿಂದ ಸರ್ಕಾರವೇ ಒಪ್ಪಿಕೊಂಡಿರುವ ಪ್ರಕಾರ ಸಮಾರು ೨ ಲಕ್ಷದ ೨೫ ಸಾವಿರ ಹೆಕ್ಟೇರ್ ಬೆಳೆ ಸಂಪೂರ್ಣ ನಾಶವಾಗಿದೆ. ಸರ್ಕಾರ ಪರಿಹಾರ ಕೊಡುತ್ತೇವೆ ಎಂದು ಹೇಳಿ ಈಗಾಗಲೇ ಮೂರು ತಿಂಗಳು ಕಳೆದರೂ ಏನೂ ಪರಿಹಾರವನ್ನು ಕೊಟ್ಟಿಲ್ಲ ಸ್ವಾಮಿ ಲಕ್ಷಾಂತರ ಮನೆಗಳು ನೆಲಸಮವಾಗಿವೆ. ಇದರ ಬಗ್ಗೆ ನಿಲುವಳಿ ಸೂಚನೆ ಮೂಲಕ ದೀರ್ಘವಾದಂಥ ಚರ್ಚೆಯಾಗಿ ಸರ್ಕಾರ ಅದಕ್ಕೆ ಪರಿಹಾರ ಒದಗಿಸಿಕೊಡಬೇಕಾಗುತ್ತದೆ. ಜನವರಿ ತಿಂಗಳಲ್ಲಿ ಸಾಕಷ್ಟು ಚರ್ಚೆಯಾಯಿತು.

(ಗೊಂದಲ)

ಶ್ರೀ ಎ.ಎಂ. ಬೆಳ್ಳಿಯಪ್ಪ:- ನಮ್ಮ ಮಾತನ್ನು ತಾವು ದಯವಿಟ್ಟು ಕೇಳಬೇಕು. ನಾನು ಆಗಿನಿಂದಲೂ ನಿಂತಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ:- ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಿರುವಂಥದ್ದು ಈ ನೆರೆ ಹಾವಳಿ ಬಗ್ಗೆ ಸರ್ಕಾರ ಏನು ಪರಿಹಾರವನ್ನು ಕೊಟ್ಟಿದೆ.

(ಗೊಂದಲ)

ಶ್ರೀ ಆರ್.ಎ. ದೇಶಪಾಂಡೆ:- ರೇಷ್ಮೆ ಗೂಡಿನ ದರ ಬಹಳ ಕಡಿಮೆಯಾಗಿದೆ. ರೈತ ಬಹಳ ಕಷ್ಟದಲ್ಲಿದ್ದಾನೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದು ಅಡ್ಜರ್ನ್‌ಮೆಂಟ್ ಮೋಷನನ್ನು ನಾವು ಮೂವ್ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿನ್ನೆ ಕೆ.ಎಸ್.ಆರ್.ಟಿ.ಸಿದು ಒಂದು ಪ್ರಮುಖವಾದಂಥದ್ದು ಇತ್ತು, ಅದಕ್ಕೋಸ್ಕರ ಇದನ್ನು ಪ್ರಸ್ತಾಪ ಮಾಡಲಿಲ್ಲ.

(ಗೊಂದಲ)

ಶ್ರೀ ಎ.ಎಂ. ಬೆಳ್ಳಿಯಪ್ಪ:- ನಾವು ಹಿಂದುಗಡೆ ಇದ್ದೇವೆ. ಆದ್ದರಿಂದ ತಮಗೆ ನಮ್ಮ ಮಾತು ಕೇಳುವುದಿಲ್ಲ. ನನ್ನ ಒಂದು ವಿಷಯವನ್ನು ದಯಮಾಡಿ ಕೇಳಬೇಕು.

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎ.ಎಂ. ಬೆಳ್ಳಿಯಪ್ಪ:- ನನ್ನ ಹೆಸರಿನಲ್ಲಿರುವಂಥ ಪ್ರಶ್ನೆ ೫೫೦ ಅದಕ್ಕೆ ಏನೂ ಕರೆಯಲೇ ಇಲ್ಲ.

ಅಧ್ಯಕ್ಷರು:- ಅದನ್ನು ಮುಂದೆ ಹಾಕಿದೆ. ನಿಮ್ಮ ಪ್ರಶ್ನೆಯನ್ನು ತಡೆಹಿಡಿಯಲಾಗಿದೆಯೆಂದು ಹೇಳಿದ್ದೇನೆ.

ಶ್ರೀ ಎ.ಎಂ. ಬೆಳ್ಳಿಯಪ್ಪ:- ನನಗೆ ಕೇಳಲಿಲ್ಲ.

ಅಧ್ಯಕ್ಷರು:- ತಾವು ಗಮನ ಕೊಟ್ಟಿಲ್ಲ.

ನಿಲುವಳಿ ಸೂಚನೆಯ ಪ್ರಸ್ತಾವನೆಗೆ ಅನುಮತಿ ಕೋರಿಕೆ.
ವಿಷಯ:- ರಾಜ್ಯದಲ್ಲಿ ನೆರೆ ಹಾವಳಿಯಿಂದ ರೈತರಿಗಾದ ನಷ್ಟಕ್ಕೆ ಪರಿಹಾರ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮ್ಮ ಗಮನ ಸೆಳೆಯುತ್ತಿದ್ದೆ. ಸದನದಲ್ಲಿ ಆ ಕಡೆ ಈ ಕಡೆ ಎಲ್ಲರಿಗೂ ಕಳಕಳಿ ಇರುವಂಥ ಸಮಸ್ಯೆ. ತಮಗೆ ಗೊತ್ತಿರುವ ಹಾಗೆ ಜನವರಿ ತಿಂಗಳಲ್ಲಿ ಇಲ್ಲಿ ಸೇರಿದಂಥ ಸಂದರ್ಭದಲ್ಲಿ ನೆರೆ ಹಾವಳಿಗೆ ಸಿಕ್ಕಂಥ ಈ ರೈತನ ಬಗ್ಗೆ ಕೇಂದ್ರಸರ್ಕಾರಕ್ಕೆ ಎರಡು ಸಾವಿರ ಕೋಟಿರೂಪಾಯಿ ನೆರವು ಬೇಕು ಎಂದು ಸರ್ಕಾರ ಎರಡು ಮನವಿಯನ್ನು ಕಳುಹಿಸಿ ಕೊಟ್ಟಿದೆ. ಇವತ್ತು ನಾವು ಫೆಬ್ರವರಿ ಮಧ್ಯಭಾಗದಲ್ಲಿ ಇಲ್ಲಿ ಸೇರಿದ್ದೇವೆ. ನಾನು ಸರ್ಕಾರವನ್ನು ಒತ್ತಾಯಮಾಡುವಂಥದ್ದು ತಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತಂದಿದ್ದೀರಾ? ಪ್ರಧಾನಮಂತ್ರಿಯವರನ್ನು ಮುಖ್ಯಮಂತ್ರಿಗಳು ಭೇಟಿ ಮಾಡಿದ್ದಾರೆಯೇ?